ಒಬ್ಬಳೇ ಹಾಡು ಕೇಳಿಕೊಂಡು, ಓದಿಕೊಂಡು ಇರುವುದು ಎಷ್ಟು ಚೆನ್ನಾಗಿರುತ್ತಲ್ಲ!... ಇದೆಲ್ಲ ಮರೆತೇಹೋಗಿತ್ತಲ್ಲ... ಅಂದುಕೊಂಡು ಆ ರಾತ್ರಿ ಆರಾಮಾಗಿಯೇ ಮಲಗಿದ್ದ ಮಲ್ಲಿಕಾಗೆ, ರಂಜಿತಾಸೇನ್ ಸ್ಟೋರಿಯನ್ನು ಕವರ್ ಮಾಡಲೇಬೇಕೆಂದು ಬಾಸ್ ನಡುರಾತ್ರಿ ಫೋನ್ ಮಾಡಿದ್ದ. ಐದಾರು ದಿನದಿಂದ ಟೀವಿಯಿಂದ ಮಾತ್ರವಲ್ಲ, ಎಲ್ಲರಿಂದಲೂ ದೂರವಾಗಿದ್ದ ಮಲ್ಲಿಕಾಗೆ ರಂಜಿತಾ ಸುದ್ದಿಯೇ ಕಿವಿಗೆ ಬಿದ್ದಿರಲಿಲ್ಲ. ಸುದ್ದಿ ಕೇಳಿದ ಮಲ್ಲಿಕಾ ಬೆಚ್ಚಿ ಬೆವತಿದ್ದರ ಅಂದಾಜೇ ಇಲ್ಲದ ಬಾಸ್, 'ರಂಜಿತಾಗೆ ನಿನ್ನಷ್ಟು ಕ್ಲೋಸ್ ಆಗಿರೋರು ಯಾರೂ ಇಲ್ಲ... ನಿನ್ನಷ್ಟು ಎಫೆಕ್ಟೀವ್ ಆಗಿ ಈ ಸ್ಟೋರೀನ ಕವರ್ ಮಾಡೋಕೆ ಯಾವ ಚಾನಲ್ನೋರ ಕೈಲೂ ಆಗಲ್ಲ...' ಎಂದು ರೈಲು ಹತ್ತಿಸುತ್ತಾ, ರಿಕ್ವೆಸ್ಟ್ ಮಾಡುವ ಧಾಟಿಯಲ್ಲಿ ಆರ್ಡರ್ ಮಾಡಿದ್ದ! ಅವನ ಹಳೇ ಕಿಸುಬಾಯಿ ಮ್ಯಾನೇಜ್ಮೆಂಟ್ ಮಾತುಗಳನ್ನು ಕೇಳಿ ಮಲ್ಲಿಕಾಗೆ ರೇಗತೊಡಗಿತ್ತು; ಆಡಿದ ಮಾತನ್ನೇ ಒಂದು ಪದ ಕೂಡ ಅತ್ತಿತ್ತ ಬದಲಾಯಿಸದೆ ಮತ್ತೆ ಮತ್ತೆ ಆಡಲು ಇವನಿಗೆ ಬೇಜಾರೇ ಆಗುವುದಿಲ್ಲವೇ ಎಂದು ಅಚ್ಚರಿಯೂ ಆಗಿತ್ತು. ರಂಜಿತಾಗೆ ಏನಾಗಿದೆಯೋ ಎಂದು ಎದೆ ದಡಗುಟ್ಟತೊಡಗಿ, ಸರಕ್ಕನೆ ಮೇಲೆದ್ದು ವಿಂಡ್ ಚೀಟರ್ ಹಾಕಿಕೊಂಡ ಮಲ್ಲಿಕಾ, ಹೋಂಡಾ ಆಕ್ಟೀವಾ ಹತ್ತಿ ರಾಜಾಮಹಲ್ ಪಾಶ್ ಬಡಾವಣೆ ತಲುಪಿ ಮಿಲೆನಿಯಂ ಅಪಾರ್ಟ್‌ಮೆಂಟಿಗಿಂತ ಹತ್ತು ಮಾರು ದೂರದಲ್ಲಿ ಛಕ್ಕನೆ ಗಾಡಿ ನಿಲ್ಲಿಸಿದ ತಕ್ಷಣ, ಕೆಲವು ತಿಂಗಳಿಂದ ಇತ್ತ ಬಂದೇ ಇರಲಿಲ್ಲವೆನ್ನುವುದು ನೆನಪಾಯಿತು...

ಗಾಡಿಯಲ್ಲಿ ಕೂತೇ ರಂಜಿತಾಸೇನಳ ಅಪಾರ್ಟ್‌ಮೆಂಟಿನ ಕಡೆಗೆ ಸುಮ್ಮನೆ ನೋಡುತ್ತಿದ್ದ ಮಲ್ಲಿಕಾಗೆ ಐದಾರು ದಿನದ ಕೆಳಗೆ ಇದ್ದಕ್ಕಿದ್ದಂತೆ ತನಗೇ ತಲೆಕೆಟ್ಟು ಸೂಯಿಸೈಡ್ ಮಾಡಿಕೊಳ್ಳಬೇಕೆನ್ನಿಸಿದ್ದು ನೆನಪಾಗಿ ಮುಜುಗರವಾಯಿತು. ತನ್ನದೇ ಈ ಪಾಡಾಗಿರುವಾಗ ರಂಜಿತಾ ಸೂಯಿಸೈಡ್ ಸ್ಟೋರಿಯನ್ನು ಹೇಗೆ ಕವರ್ ಮಾಡುವುದು ಎಂದು ಇರಿಸುಮುರಿಸಾಗಿ ಕತ್ತೆತ್ತಿ ನೋಡಿದಳು: ಅಪಾರ್ಟ್‌ಮೆಂಟಿನ ಮುಂದೆ ಇಬ್ಬರು ಪೊಲೀಸರು ಮುಚ್ಚಿಕೊಳ್ಳುತ್ತಿದ್ದ ತಮ್ಮ ಕಣ್ಣುಗಳನ್ನು ಬಲವಂತವಾಗಿ ತೆರೆಯಲೆತ್ನಿಸುತ್ತಾ, ಜೀವವೇ ಇಲ್ಲದವರಂತೆ ಕುರ್ಚಿಗಳ ಮೇಲೆ ಮೈ ಚೆಲ್ಲಿಕೊಂಡಿದ್ದರು. ಆ ಪೊಲೀಸರದೂ ತನ್ನದೂ ಹೆಚ್ಚುಕಡಿಮೆ ಒಂದೇ ಅವಸ್ಥೆ ಅನ್ನಿಸಿ ಮಲ್ಲಿಕಾಗೆ ಪೊಲೀಸರ ಬಗ್ಗೆ ಅಯ್ಯೋ ಅನ್ನಿಸಿತು.

ಎಷ್ಟೋ ಹೊತ್ತು ಹಾಗೇ ನಿಂತ ಮಲ್ಲಿಕಾಗೆ ರಂಜಿತಾಳ ಅಪಾರ್ಟ್‌ಮೆಂಟಿನ ಕಡೆಗೆ ಹೊರಡಲು ಕಾಲೇ ಬರಲಿಲ್ಲ. ರೂಮಿಗೆ ವಾಪಸ್ ಹೋಗಬೇಕು ಅನ್ನಿಸಿದ ತಕ್ಷಣ, ಎಂಥದೋ ಭಯ ಮುತ್ತಿ, ಅದನ್ನು ಹೇಳಿಕೊಳ್ಳಲು ಈಗ ರಮೇಶ್ ಇರಬೇಕಾಗಿತ್ತು ಎನ್ನಿಸಿತು. ಅವತ್ತು ಹೇಳದೆ ಕೇಳದೆ ಅವನ ಫ್ಲಾಟ್ ಬಿಟ್ಟು ಹೊರಟವಳು ತಾನೇ ಎಂಬ ನೆನಪು ಚುಚ್ಚಿದರೂ, ತನ್ನನ್ನೇ ಹಳಿದುಕೊಳ್ಳಲು ಇಷ್ಟವಾಗದೆ, ಗಂಡಸಿನ ಎದೆ ಇಷ್ಟೊಂದು ಕಲ್ಲಾಗಿರುತ್ತದೆಯೆ? ಗಂಡಿನ ಬಗೆಗೆ ಹೆಣ್ಣು ತೋರುವ ಮುನಿಸಿನ ಹಿಂದೆ ಅವನನ್ನು ಮರಳಿ ಪಡೆಯುವ ಸುಪ್ತ ಕಾತರವಿರುತ್ತದೆ ಎಂಬ ಸೂಕ್ಷ್ಮ ಅವನಿಗೆ ಗೊತ್ತಿರಲಾರದೆ? ಹೀಗೆಲ್ಲ ಅನ್ನಿಸತೊಡಗಿ, ಮಲ್ಲಿಕಾಗೆ ತನ್ನ ಬಗೆಗೇ ಮರುಕ ಹುಟ್ಟುತ್ತಿದ್ದಂತೆ, ರಂಜಿತಾ ಬಗೆಗಿನ ಕನಿಕರ ಹೆಚ್ಚತೊಡಗಿತು. ಹೆಚ್ಚಿನ ಅಪಾಯಗಳಿಲ್ಲದೆ ಬದುಕಿ ಉಳಿದಿರುವಳೆಂದು ಹೇಳಲಾದ ರಂಜಿತಾ ಯಾಕೆ ಇದ್ದಕ್ಕಿದ್ದಂತೆ ಆರನೆಯ ಮಹಡಿಯ ಬಾಲ್ಕನಿಯಿಂದ ಹಾರಿರಬಹುದು, ಅವಳನ್ನು ಯಾವ ನರ್ಸಿಂಗ್ ಹೋಮಿಗೆ ಸೇರಿಸಿರಬಹುದು... ಅದನ್ನಾದರೂ ತಿಳಿಯೋಣವೆಂದು ಹೆಜ್ಜೆ ಕಿತ್ತಿಕ್ಕುತ್ತಾ ಮಲ್ಲಿಕಾ ಅಪಾರ್ಟ್‌ಮೆಂಟಿನ ಕಡೆ ನಡೆದಳು.

ಅಪಾರ್ಟ್‌ಮೆಂಟಿನ ಎದುರು ಕೂತಿದ್ದ ಇಬ್ಬರು ಪೊಲೀಸರಲ್ಲಿ ಒಬ್ಬ ಮಲ್ಲಿಕಾಳನ್ನು ಗುರುತು ಹಿಡಿದು, 'ಸಾರಿ ಮೇಡಂ! ಬೆಳಗ್ಗೆ ಎಂಟು ಗಂಟೆಗೆ ಎಸ್.ಪೀ. ಸಾಹೇಬರೇ ಬ್ರೀಫ್ ಮಾಡ್ತಾರೆ... ಏನೂ ನ್ಯೂಸ್ ಇಲ್ಲ' ಅಂದ. ತಂತಾನೇ ಮುಚ್ಚಿಕೊಳ್ಳುತ್ತಿದ್ದ ಅವನ ಕಣ್ಣ ರೆಪ್ಪೆಯನ್ನೂ, ಸುಸ್ತಾಗಿ